**ದಿನಾಂಕ 18-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎಸ್.ಎ. ವಕೀಲರಿಂದ**

ಈ ದಾವೆ ನನ್ನ ತಾಯಿ ದಾಖಲಿಸಿದ್ದಾಳೆ ಎಂದರೆ ಸರಿ. ನ್ಯಾಯಾಲಯದಲ್ಲಿ ತನ್ನ ಪರವಾಗಿ ಸಾಕ್ಷ್ಯ ನುಡಿಯುವಂತೆ ನನ್ನ ತಾಯಿ ನನಗೆ ಅಧಿಕಾರ ಪತ್ರ ಬರೆದುಕೊಟ್ಟಿದ್ದಾಳೆ. ದಾವಾ ಆಸ್ತಿಯ ಸರ್ವೆ ನಂ. 140 ಇರುತ್ತದೆ. ಅದರ ಕ್ಷೇತ್ರ 4 ಎಕರೆ 33 ಗುಂಟೆ ಇರುತ್ತದೆ. ಸದರಿ ದಾವಾ ಆಸ್ತಿಯು ನಮಗೆ ನಮ್ಮ ತಾತನಿಂದ ಬಂದಿರುತ್ತದೆ. ನನ್ನ ತಾತನ ಲಿಂಗಪ್ಪ. ಸರ್ವೆ ನಂ. 140, ಕ್ಷೇತ್ರ 4 ಎಕರೆ 33 ಗುಂಟೆ ಪೈಕಿ ಪಶ್ಚಿಮದ 3 ಎಕರೆ 26 ಗುಂಟೆಯನ್ನು ನಾರಾಯಣರೆಡ್ಡಿಯವರಿಗೆ ಮಾರಾಟ ಮಾಡಿರುತ್ತೇನೆ. ನಾರಾಯಣರೆಡ್ಡಿಯವರಿಗೆ ಮಾರಾಟ ಮಾಡಿ ಉಳಿದ ಜಮೀನು ಅವರ ಜಮೀನಿನ ಪಕ್ಕದಲ್ಲಿ ಇದೆ ಎಂದರೆ ಸರಿ.

ನಾರಾಯಣರೆಡ್ಡಿ ಇವರು ನಮ್ಮಿಂದ ಖರೀದಿ ಪಡೆದ ಜಮೀನಿನ ಪೂರ್ವಕ್ಕೆ ನರಸಪ್ಪ ಇವರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ ಸಂಗಟಿ ಭೀಮಣ್ಣ ಇವರ ಜಮೀನು ಇದೆ. ಉತ್ತರಕ್ಕೆ ಹಳ್ಳ ಇದೆ ಎಂದರೆ ಸರಿ. ದಕ್ಷಿಣಕ್ಕೆ ನೀಲಮ್ಮ ಇವರ ಜಮೀನು ಇದೆ ಎಂದರೆ ಸರಿ. ದಾವಾ ಜಮೀನು ನರಸಪ್ಪ ಇವರ ಹೊಲದ ಪಕ್ಕದಲ್ಲಿ ಬರುತ್ತದೆ.

ನನ್ನ ಜಮೀನಿನ ಪಕ್ಕ ನರಸಪ್ಪ ಇವರ ಜಮೀನು ಇದ್ದು, ಅದರ ಪಕ್ಕ ಆದಪ್ಪನ ಜಮೀನು ಇದ್ದು, ಅದರ ಪಕ್ಕದಲ್ಲಿ ಪ್ರತಿವಾದಿಯರ ಜಮೀನುಗಳು ಇವೆ ಎಂದರೆ ಸರಿ. ಪ್ರತಿವಾದಿ ನಂ. 1 ರ ಜಮೀನಿನ ಪೂರ್ವಕ್ಕೆ ಭೀಮಣ್ಣ, ರಮೇಶ ಮತ್ತು ಲಕ್ಷ್ಮಪ್ಪ ಇವರ ಜಮೀನು ಇದೆ ಎಂದರೆ ಸರಿ. ಪ್ರತಿವಾದಿಗಳ ಜಮೀನಿನ ದಕ್ಷಿಣಕ್ಕೆ ನೀಳಮ್ಮ ಇವರ ಜಮೀನು ಇದೆ ಎಂದರೆ ಸರಿ. ದಾವಾ ಜಮೀನು ನಾರಾಯಣ ರೆಡ್ಡಿ ತಂ. ಕೋಟಿ ರೆಡ್ಡಿ ಇವರ ಜಮೀನಿನ ಪಕ್ಕ ಬರಬಹುದು ಎಂದರೆ ಸರಿ.

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಮಗೆ ಮತ್ತು ಪ್ರತಿವಾದಿಯರಿಗೆ ಜಮೀನು ಖರೀದಿ ಮಾಡುವ ವಿಷಯದಲ್ಲಿ ಕಿರಿಕಿರಿ ಇದೆ ಎಂದರೆ ಸರಿ. ಸದರಿ ಕಾರಣಕ್ಕೆ ಈ ದಾವೆ ದಾಖಲಿಸಿದ್ದೇವೆ ಎಂದರೆ ಸರಿ.

ದಾವಾ ಆಸ್ತಿಯ ಸರ್ವೆ ನಂಬರಿನಲ್ಲಿ ನಾವು ಕಬ್ಜಾವಹಿವಾಟಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿ ನಾನೇ ಇದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಹನುಮೇಶ ತಂ. ಕರಿಯಪ್ಪ ನಮಗೆ ಸಂಬಂಧಿಕರು. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಹನುಮೇಶ ತಂ. ಕರಿಯಪ್ಪ ಮತ್ತು ಜುಮ್ಮಮ್ಮ ಎಂದು ಜಂಟಿ ಹೆಸರು ದಾಖಲಾಗಿದೆ ಎಂದರೆ ಸಾಕ್ಷಿ ಬೇರೆ ಆಸ್ತಿಗೆ ಸಂಬಂಧಿಸಿದಂತೆ ಅವರ ಹೆಸರು ಜಂಟಿ ಇದೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರು ತಮ್ಮ ಆಸ್ತಿಯ ಕಬ್ಜಾವಹಿವಾಟಿಯಲ್ಲಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ನಮಗೆ ತೊಂದರೆ ಕೊಡುತ್ತಿದ್ದ ಕಾರಣ ನನ್ನ ತಾಯಿ ಈ ದಾವೆ ದಾಖಲಿಸಿರುತ್ತಾಳೆ. ಏನು ತೊಂದರೆ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಯರು ನಮ್ಮ ಜಮೀನಿನಲ್ಲಿ ನಮಗೆ ಬರಬೇಡಿ ಎಂದು ತೊಂದರೆ ಕೊಡುತ್ತಿದ್ದ ಕಾರಣ ದಾಖಲಿಸಿದ್ದಾಗಿ ನುಡಿಯುತ್ತಾರೆ. ಒಂದು ವರ್ಷದ ಹಿಂದೆ ಪ್ರತಿವಾದಿಯರು ನಮಗೆ ತೊಂದರೆ ಕೊಟ್ಟಿದ್ದರು. ದಾವಾ ಆಸ್ತಿಯ ಸಾಗುವಳಿಯನ್ನು ನಾವೆ ಮಾಡುತ್ತಿದ್ದೇವೆ. ದಾವಾ ಆಸ್ತಿಯಲ್ಲಿ ಭತ್ತ ಬೆಳೆಯುತ್ತೇವೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.**

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

**ಓ. ಹೇ. ಕೇ. ಸರಿ ಇದೆ,**

**1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,**

**ಸಿಂಧನೂರು.**